



# ಸರಳ ಮದುವೆಗೆ ಸುಲಭ ಸೂತ್ರಗಳೇನು?

■ ಕೆ.ವಿ. ರಂಗನಾಥಾಚಾರ್

ಚಿನ್ನದ ಬೆಲೆ ಜನ ಸಾಮಾನ್ಯರ ಕೈಗೆಟುಕದು, ಅಕ್ಕಿ, ಬೇಳೆ ದಿನಸಿ ಸಾಮಾಗ್ರಿಗಳ ಬೆಲೆ ದಿನೇ ದಿನೇ ಏರುತ್ತಿದೆ, ಬಟ್ಟೆಬರೆ ಬೆಲೆಯೂ ಬಡವರಿಗೊಂದು ಹೊರೆಯೇ. ಮದುವೆಗೆ ಅಗತ್ಯವೆನಿಸುವ ಈ ಎಲ್ಲ ವಸ್ತುಗಳ ಬೆಲೆ ಏರಿಕೆಯ ಇಂಥ ಸಂದರ್ಭದಲ್ಲಿ ಸರಳವಾಗಿ ಮದುವೆ ಮಾಡಬೇಕೆಂದರೂ ಸಾವಿರಾರು ರೂಪಾಯಿ ಕೈಬಿಡುತ್ತದೆ. ಆದರೆ ಹಿತಮಿತವಾಗಿ ಖರ್ಚು ಮಾಡಿ ಮದುವೆ ಮಾಡಲು ಸುಲಭದ ದಾರಿಯೂ ಇದೆ. ಅದನ್ನು ಪಾಲಿಸಬೇಕು ಅಷ್ಟೆ.

ಇಂದು ನಮ್ಮ ದೇಶದಲ್ಲಿ ದುಬಾರಿ ಮದುವೆಗಳು, ವರದಕ್ಷಿಣೆ, ವರೋಪಚಾರ ಮುಂತಾದವು ಕೋಟ್ಯಾಂತರ ಜನರನ್ನು ತೊಂದರೆಗೆ ಸಿಲುಕಿಸಿವೆ. ವಧುವಿನ ಕಡೆಯವರು ಮದುವೆಯ ಖರ್ಚಿನ ಜೊತೆಗೆ ವರನಿಗೆ ಹಣ, ಒಡವೆ, ಕಾರು, ಸೈಟು, ಮನೆ, ಗೃಹೋಪಯೋಗಿ ವಸ್ತುಗಳು ಮುಂತಾದವುಗಳನ್ನು ಕೊಡಬೇಕಾದ ಪದ್ಧತಿ ಇದೆ. ಈ ದುಷ್ಟ ಪದ್ಧತಿಗೆ ಹಣ ಹೊಂದಿಸಲು ತೊಂದರೆಯಾಗುವುದೆಂದು ಮಗು ಗರ್ಭದಲ್ಲಿರುವಾಗಲೇ ಸ್ಕ್ಯಾನಿಂಗ್ ಮಾಡಿಸಿ ಹೆಣ್ಣು ಭ್ರೂಣಗಳ ಹತ್ಯೆಯಾಗುತ್ತಿದೆ. ನಮ್ಮ ದೇಶದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸುಮಾರು ಒಂದು ಕೋಟಿ ಹೆಣ್ಣು ಭ್ರೂಣಗಳ ಹತ್ಯೆಯಾಗಿದೆಯೆಂದು ಅಂದಾಜು ಮಾಡಿದ್ದಾರೆ. ಈಗ ಸರ್ಕಾರ ಈ ರೀತಿಯ ಸ್ಕ್ಯಾನಿಂಗ್ ಕಾನೂನು ಬಾಹಿರ ಎಂದು ಘೋಷಿಸಿದೆ. ಆದರೂ ಸಹ ಕದ್ದು ಮುಚ್ಚಿ ಈ ರೀತಿಯ ಸ್ಕ್ಯಾನಿಂಗ್ ಈಗಲೂ ನಡೆಯುತ್ತಿದೆ. ಕೊಟ್ಟ ವರದಕ್ಷಿಣೆ ಸಾಲದೆಂದೋ, ಇಲ್ಲವೇ ಇನ್ನಷ್ಟು ವರದಕ್ಷಿಣೆ ಬೇಕೆಂದು ವಧುವಿನ ಮತ್ತು ಅವರ ಮನೆಯವರ ಮೇಲೆ ಒತ್ತಡ ತಂದು, ಇದು ವಧುವಿನ ಆತ್ಮಹತ್ಯೆಗೆ ಇಲ್ಲವೇ ಹತ್ಯೆಯಲ್ಲಿ ಮುಗಿಯುವ ಸಾವಿರಾರು ಪ್ರಕರಣಗಳು ನಮ್ಮ ದೇಶದಲ್ಲಿ ಪ್ರತಿವರ್ಷ ನಡೆಯುತ್ತಿದೆ. ಈ ದುಷ್ಟ ಪದ್ಧತಿಯನ್ನು ನಿರ್ಮೂಲ ಮಾಡುವುದು ನಮ್ಮೆಲ್ಲರ ಪವಿತ್ರ ಕರ್ತವ್ಯ, ವಿವಾಹಗಳನ್ನು ಸರಳಗೊಳಿಸಿ, ವರದಕ್ಷಿಣೆ ಪದ್ಧತಿಯನ್ನು ನಿರ್ಮೂಲ ಮಾಡಲು ನಾವು ಈ ಕೆಳಕಂಡ ನಿಯಮಗಳನ್ನು ಪಾಲಿಸಬಹುದು.

- ಮದುವೆಯಾಗುವ ಪ್ರತಿ ಗಂಡೂ, ತನ್ನ ಸ್ವಂತ ಪ್ರಾಮಾಣಿಕ ದುಡಿಮೆಯಿಂದ ಮತ್ತು ಅಗತ್ಯ ಬಿದ್ದರೆ ತನ್ನ ಹೆಂಡತಿಯ ದುಡಿಮೆ ಯಿಂದ ಸಂಸಾರವನ್ನು ನಡೆಸುತ್ತೇನೆ ಎಂದು ದೃಢ ನಿರ್ಧಾರ ಮಾಡಬೇಕು.
- ಮದುವೆಗೆ ಮುಂಚೆಯೇ ವರನು ತನ್ನ ಪ್ರಾಮಾಣಿಕ ದುಡಿಮೆಯಿಂದ ಬಂದ ಹಣದಲ್ಲಿ ಸರಳ ರೀತಿಯಲ್ಲಿ ಸಂಸಾರ ನಡೆಸಲು ಬೇಕಾಗುವ ಗೃಹೋಪಯೋಗಿ ವಸ್ತುಗಳನ್ನು ತೆಗೆದುಕೊಳ್ಳಬೇಕು.
- ಮದುವೆಯ ಸಮಯದಲ್ಲಿ ವರನಾಗಲೀ, ವರನ ಕಡೆಯವರಾಗಲೀ, ಹಣ, ಒಡವೆ, ಬಟ್ಟೆ-ಬರೆ, ಗೃಹೋಪಯೋಗಿ ವಸ್ತುಗಳು, ಕಾರು, ಸೈಟು, ಮನೆ ಮುಂತಾದ ಯಾವುದೇ ರೀತಿಯ ವಸ್ತುಗಳನ್ನು ತೆಗೆದುಕೊಳ್ಳಬಾರದು.
- ವರದಕ್ಷಿಣೆ ಇಲ್ಲದ ಸರಳ ವಿವಾಹದ ಖರ್ಚನ್ನು ಗಂಡು ಮತ್ತು ಹೆಣ್ಣಿನ ಕಡೆಯವರು ಸಮನಾಗಿ ಹಂಚಿಕೊಳ್ಳಬೇಕು.
- ಮದುವೆಯ ಸಮಯದಲ್ಲಿ ಯಾವುದೇ ರೀತಿಯ ಉಡುಗೊರೆಗಳನ್ನು ಕೊಡುವುದಾಗಲೀ, ತೆಗೆದುಕೊಳ್ಳುವುದಾಗಲೀ ನಿಷೇಧಿಸಬೇಕು.
- ಮದುವೆಗಳನ್ನು ಛತ್ರದಲ್ಲಿ ಮಾಡುವುದರಿಂದ ಖರ್ಚು ಹೆಚ್ಚು, ಮದುವೆಯನ್ನು ಯಾವುದೇ ಶುಲ್ಕ ವಿಧಿಸದ ಇಲ್ಲವೇ ಅತ್ಯಂತ ಕಡಿಮೆ ಶುಲ್ಕವನ್ನು ವಿಧಿಸುವ ದೇವಸ್ಥಾನಗಳಲ್ಲಿ, ಇಲ್ಲವೇ ಮನೆಯ ಅಂಗಳದಲ್ಲಿ ನಡೆಸಬಹುದು.
- ಬೆಳಿಗ್ಗೆ ಮದುವೆ, ಲಘು ಉಪಾಹಾರ ಮತ್ತು ಕಾಫಿ, ಮದುವೆಯ ನಂತರ ಹೋಟೆಲ್ ಮುಂತಾದ ಕಡೆ ರಿಸೆಪ್ಷನ್ ಏರ್ಪಡಿಸಬಹುದು. ನಂತರ ಸರಳ ಊಟ ಅಂದರೆ ಸಾರು, ಅನ್ನ, ಮೊಸರನ್ನ, ಒಂದು ಲಾಡು, ಒಂದು ಬಾಳೆಹಣ್ಣು ಇಷ್ಟಕ್ಕೆ ಮಿತಿಗೊಳಿಸಬಹುದು. ಊಟಕ್ಕೆ ಹತ್ತಿಪ್ಪತ್ತು ಬಗೆಯ ಭಕ್ಷ್ಯಗಳನ್ನು ಮಾಡುವುದು ನಿಲ್ಲಬೇಕು.
- ಮದುವೆ ಮತ್ತು ರಿಸೆಪ್ಷನ್ ಮಧ್ಯಾಹ್ನದೊಳಗೆ ಮುಗಿದು, ಊಟದ ನಂತರ ಎಲ್ಲರೂ ಹೊರಡಬಹುದು. ಅಂದರೆ ಮದುವೆಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳು ಅರ್ಧ ದಿನದಲ್ಲಿ ಮುಕ್ತಾಯವಾಗಬೇಕು. ಇದರಿಂದ ಮದುವೆಯ ಖರ್ಚು ಕಡಿಮೆಯಾಗುತ್ತದೆ.
- ಸಾಮೂಹಿಕ ವಿವಾಹಗಳಿಗೆ ಪ್ರೋತ್ಸಾಹ ನೀಡಬೇಕು. ಇದರಿಂದ ಕಡಿಮೆ ಆದಾಯದ ಮತ್ತು ಮಧ್ಯಮ ವರ್ಗದ ಜನರಿಗೆ ಉಪಯೋಗವಾಗುತ್ತದೆ.
- ವರದಕ್ಷಿಣೆ ಇಲ್ಲದ ಸರಳ ವಿವಾಹ ನಡೆಸಿದ ವರ, ವಧು ಮತ್ತು ಅವರ ಪೋಷಕರಿಗಾಗಿ ಪ್ರೋತ್ಸಾಹದ ಮಾತುಗಳನ್ನು ಆಡಬೇಕು.
- ಮಠಗಳ ಸ್ವಾಮಿಗಳು, ಹಿರಿಯರೂ, ಸಮಾಜದ ನಾಯಕರು, ಸಮಾಜ ಸೇವಕರು ಮತ್ತು ನಾವೆಲ್ಲರೂ ಅವಕಾಶ ದೊರೆತಾಗ ಜನರಿಗೆ ವರದಕ್ಷಿಣೆ ಇಲ್ಲದ ಸರಳ ವಿವಾಹಗಳ ಬಗ್ಗೆ ತಿಳಿಸಿಕೊಡಬೇಕು. ನಮ್ಮಲ್ಲಿ ಸಾವಿರಾರು ಜನ ತಮ್ಮ ಜೀವನವನ್ನೇ ಸಮಾಜಕ್ಕೆ ಸಮರ್ಪಿಸಿರುವ ಸನ್ಯಾಸಿಗಳು ಮತ್ತು ಸಂತರೂ ನಮ್ಮಲ್ಲಿ ಇದ್ದಾರೆ. ಇವರು ಜನರಿಗೆ ವರದಕ್ಷಿಣೆಯಿಲ್ಲದೆ ಸರಳ ವಿವಾಹಗಳ ಬಗ್ಗೆ ಮಾರ್ಗದರ್ಶಕರಾಗಿ ಜನರ ಕಷ್ಟ ನಿವಾರಣೆಗೆ ದುಡಿಯಬಹುದು.
- ವರದಕ್ಷಿಣೆ ಇಲ್ಲದ ಸರಳ ವಿವಾಹ ಮಾಡಿದರೆ ಜನ ಏನು ತಿಳಿದುಕೊಳ್ಳುತ್ತಾರೋ, ಎಂಬ ಅಳುಕನ್ನು ಬಿಟ್ಟು ಧೈರ್ಯವಾಗಿ ಸರಳ ವಿವಾಹಗಳನ್ನು ಮಾಡಿ ಮಾರ್ಗದರ್ಶಕರಾಗಬೇಕು.
- ಶ್ರೀಮಂತರು, ವರದಕ್ಷಿಣೆ ಇಲ್ಲದ ವಿವಾಹಗಳನ್ನು ಏರ್ಪಡಿಸಿ, ಮಧ್ಯಮ ವರ್ಗದ ಮತ್ತು ಕಡಿಮೆ ಆದಾಯದ ಜನರಿಗೆ ಮಾದರಿಯಾಗಬೇಕು.
- ವರದಕ್ಷಿಣೆ ಇಲ್ಲದ ಸರಳ ವಿವಾಹಗಳಿಗೆ ಯುವಕ, ಯುವತಿಯರು ದೃಢ ಸಂಕಲ್ಪ ಮಾಡಬೇಕು. ಕಾಲೇಜುಗಳಲ್ಲಿ ಹಿರಿಯರಿಂದ ಭಾಷಣಗಳನ್ನು ಏರ್ಪಡಿಸಿ ಯುವ ಜನತೆಯ ಮನಪರಿವರ್ತನೆ ಮಾಡಬೇಕು.

ಮೇಲಿನ ನಿಯಮಗಳು ಮಾತ್ರವಲ್ಲದೇ ಪ್ರತಿಯೊಬ್ಬರೂ ವರದಕ್ಷಿಣೆಯಿಲ್ಲದ ಸರಳ ವಿವಾಹಗಳನ್ನು ನಡೆಸಲು ಇತರ ಏನಾದರೂ ಮಾರ್ಗಗಳಿವೆಯೋ ಎಂದು ಯೋಚಿಸಿ ಕೋಟ್ಯಾಂತರ ಜನರ ತೊಂದರೆಗೆ ಕಾರಣವಾಗಿರುವ ಈ ಸಾಮಾಜಿಕ ಪದ್ಧತಿಯನ್ನು ನಿರ್ಮೂಲ ಮಾಡಲು ದೃಢ ಪ್ರಯತ್ನ ಮಾಡಬೇಕು. ■